ಒಟ್ಟು ಪ್ರಶ್ನೆಗಳ ಸಂಖ್ಯೆ : 26 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8

Total No. of Questions : 26 ] [ Total No. of Printed Pages : 8

**ಸಂಕೇತ ಸಂಖ್ಯೆ : 102-EK (NS)**

**Code No. : 102-EK (NS)**

**ಶಿಕ್ಷಣ**

**EDUCATION**

# ಮೂಲ ಪರಿಕಲ್ಪನೆಗಳ ಪರಿಚಯ

# INTRODUCTION TO BASIC CONCEPTS

(ಕನ್ನಡ ಮತ್ತು ಇಂಗ್ಲಿಷ್ ಭಾಷಾಂತರ)

( Kannada & English Versions )

**(ಹೊಸ ಪಠ್ಯವಸ್ತು)**

**( New Syllabus )**

ದಿನಾಂಕ : 30. 06. 2015 ]

Date : 30. 06. 2015 ]

ಸಮಯ : ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 1.00 ರವರೆಗೆ ] [ ಗರಿಷ್ಠ ಅಂಕಗಳು : 60

Time : 10.00 A.M. to 1.00 P.M. ] [ Max. Marks : 60

*ಅಭ್ಯರ್ಥಿಯ ನೋಂದಣಿ ಸಂಖ್ಯೆ*

*Register Number of the Candidate*

(ಕನ್ನಡ ಭಾಷಾಂತರ)

( Kannada Version )

**ಭಾಗ – I**

ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸೂಕ್ತವಾದ ಒಂದು ಆಯ್ಕೆಯನ್ನು ಬರೆಯಿರಿ. ಪ್ರತಿ ಪ್ರಶ್ನೆಗೆ ಒಂದು ಅಂಕ ನೀಡಲಾಗಿದೆ. ಪ್ರತಿ ಪ್ರಶ್ನೆಯು ಕಡ್ಡಾಯ : 10 × 1 = 10

1. ಶಾಲಾ ಆಡಳಿತದಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆಗೆ ಅವಕಾಶ ನೀಡುವ ಅಂಶ

   (A) ಕೇಂದ್ರೀಕೃತ ಶಾಲಾ ಆಡಳಿತ  (B) ಸಮುದಾಯದ ಕಾರ್ಯಕ್ರಮಗಳು

   (C) ಜನಪ್ರತಿನಿಧಿಗಳ ಚುನಾವಣೆ  (D) ಪರಿಣಾಮಕಾರಿ ವಿಕೇಂದ್ರೀಕರಣ

2. ಸಾಮಾಜಿಕ ಅನ್ಯೋನ್ಯಕ್ರಿಯೆಯ ಮಾದರಿ ಸಿದ್ಧಾಂತದ ಪ್ರಕಾರ ಮಾನಸಿಕ ಪ್ರಕ್ರಿಯೆಯ ಕ್ರಮಾನುಗತಿ

   (A) ಅವಧಾನ, ನೆನಪಿಡುವುದು, ಚಲನಾಪ್ರತಿಕ್ರಿಯೆ, ಅಭಿಪ್ರೇರಣೆ

   (B) ನೆನಪಿಡುವುದು, ಚಲನಾಪ್ರತಿಕ್ರಿಯೆ, ಅವಧಾನ, ಅಭಿಪ್ರೇರಣೆ

   (C) ಅವಧಾನ, ಅಭಿಪ್ರೇರಣೆ, ನೆನಪಿಡುವುದು, ಚಲನಾಪ್ರತಿಕ್ರಿಯೆ

   (D) ನೆನಪಿಡುವುದು, ಅವಧಾನ, ಚಲನಾಪ್ರತಿಕ್ರಿಯೆ, ಅಭಿಪ್ರೇರಣೆ

3. ಅಂತರ್ಗತ (ಒಳಗೊಳ್ಳುವ) ಶಿಕ್ಷಣದ ಪರಿಕಲ್ಪನೆಯು ಕೆಳಕಂಡ ಅಂಶಗಳ ಫಲವಾಗಿದೆ

I. ಮಕ್ಕಳ ಕಲಿಕೆಯ ಬಗ್ಗೆ ಕಾಳಜಿ

II. ನ್ಯೂನತೆಯುಳ್ಳವರ ಬಗ್ಗೆ ಕರುಣೆ

III. ಸಾಮಾಜಿಕ ನ್ಯಾಯ

(A) I, II ಮತ್ತು III (B) I ಮತ್ತು III

(C) I ಮತ್ತು II (D) II ಮತ್ತು III

4. ಪಾಠದ ಬೆಳವಣಿಗೆಯ ಹಂತದಲ್ಲಿ ಶಿಕ್ಷಕರು ಬಳಸುವ ಮೌಲ್ಯಾಂಕನ

(A) ರೂಪಣಾತ್ಮಕ ಮೌಲ್ಯಾಂಕನ (B) ನೈದಾನಿಕ ಪರೀಕ್ಷೆ

(C) ಸಂಕಲನಾತ್ಮಕ ಮೌಲ್ಯಾಂಕನ (D) ಸಾಧನೀಯ ಪರೀಕ್ಷೆ

5. ರೂಪಣಾತ್ಮಕ ಅವಧಿಯಲ್ಲಿ ಲಿಂಗದ ಪಾತ್ರಗಳನ್ನು ಹೆಚ್ಚು ಪ್ರಭಾವಿಸುವ ಪರಿಸರವೆಂದರೆ

(A) ರಾಜಕೀಯ (B) ಶೈಕ್ಷಣಿಕ

(C) ಕೌಟುಂಬಿಕ (D) ಮನೋವೈಜ್ಞಾನಿಕ

6. ಬೋಧಿಸಲು ಕಲಿಯುವುದು ಎಂದರೆ

I. ಅಧ್ಯಾಪನಾ ಕೌಶಲಗಳನ್ನು ಗಳಿಸುವುದು

II. ವಿಷಯವಸ್ತುವನ್ನು ಆಳವಾಗಿ ಗ್ರಹಿಸುವುದು

III. ಪಠ್ಯಪುಸ್ತಕವನ್ನು ಚೆನ್ನಾಗಿ ಓದುವುದು

IV. ವಿದ್ಯಾರ್ಥಿಗಳನ್ನು ಅರ್ಥಮಾಡಿಕೊಳ್ಳುವುದು

(A) I, II ಮತ್ತು III (B) I ಮತ್ತು II

(C) III ಮತ್ತು IV (D) I, II ಮತ್ತು IV

7. ಶಿಕ್ಷಕರಲ್ಲಿನ ವೃತ್ತಿಪರ ಬೆಳವಣಿಗೆಯನ್ನು ಸಾಧಿಸಲು ಇದರಲ್ಲಿ ತೊಡಗಿಸಿಕೊಳ್ಳಬೇಕು

(A) ಜನಗಣತಿ ಕಾರ್ಯ (B) ಪಠ್ಯಕ್ರಮ ಸಂಬಂಧಿ ಸಾಮಗ್ರಿಗಳ ಬೆಳವಣಿಗೆ

(C) ಚುನಾವಣಾ ಕರ್ತವ್ಯ (D) ಪದೇ ಪದೇ ತರಬೇತಿಗಳು

8. 'ಎಲ್ಲರಿಗೂ ಶಿಕ್ಷಣ'ದ ಗುರಿ ಸಾಧನೆಗಾಗಿ ಅತ್ಯವಶ್ಯಕವಾಗಿರುವುದು

(A) ವಿಷಯಾಧಾರಿತ ಬೋಧನೆಗೆ ಒತ್ತು ನೀಡುವಿಕೆ

(B) ಶಾಲೆಗಳನ್ನು ಅಂದಗೊಳಿಸುವುದು

(C) ಪಾಲಕರು ಮತ್ತು ಸಮುದಾಯದ ನಾಯಕರ ಭಾಗವಹಿಸುವಿಕೆ

(D) ಬುದ್ಧಿವಂತ ಮಕ್ಕಳ ದಾಖಲಾತಿ

9. ಚಲನಾಂಗ ನ್ಯೂನತೆಯುಳ್ಳ ಮಗುವು ಶಾಲೆಯಲ್ಲಿನ ಶೌಚಾಲಯವನ್ನು ಬಳಸಲು ಸಾಧ್ಯವಾಗದೆ, ಶಾಲೆಗೆ ಗೈರುಹಾಜರಾಗುತ್ತಿದೆ. ಈ ಸನ್ನಿವೇಶದಲ್ಲಿ ಮಗುವಿಗೆ ಎದುರಾಗಿರುವ ಅಡೆತಡೆಯೆಂದರೆ

(A) ಭೌತಿಕ ವಿನ್ಯಾಸ (B) ದೈಹಿಕ

(C) ಬೌದ್ಧಿಕ (D) ಮನೋವೈಜ್ಞಾನಿಕ

10. ಕರ್ನಾಟಕ ರಾಜ್ಯದಲ್ಲಿನ ಅತ್ಯಂತ ವಿಸ್ತೃತ ಶೈಕ್ಷಣಿಕ ಜಾಲವೆಂದರೆ

(A) ವಸತಿ ಶಾಲೆಗಳು (B) ಪ್ರೌಢಶಾಲೆಗಳು

(C) ನವೋದಯ ಶಾಲೆಗಳು (D) ಪ್ರಾಥಮಿಕ ಶಾಲೆಗಳು

## ಭಾಗ – II

ಈ ಕೆಳಗಿನವುಗಳಲ್ಲಿ ಯಾವುದಾದರೂ **ಐದು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. ಪ್ರತಿಯೊಂದು ಉತ್ತರವು ಅರ್ಧ ಪುಟಕ್ಕೆ ಮೀರದಿರಲಿ : $5 \times 2 = 10$

11. ಪರಿಣಾಮಕಾರಿ ಬೋಧನಾಶಾಸ್ತ್ರದ ಮಹತ್ತ್ವವೇನು ?
12. ಮೀಸಲಾತಿ ನೀತಿಯ ಯಾವುದಾದರೂ ಎರಡು ಪ್ರಯೋಜನಗಳನ್ನು ವಿವರಿಸಿ.
13. ಕಲಿಕೆಯ ಯಾವುದಾದರೂ ಎರಡು ಗುಣಲಕ್ಷಣಗಳನ್ನು ವಿವರಿಸಿ.
14. ಶಾಲೆಗಳಲ್ಲಿ ಮಕ್ಕಳನ್ನು ರೂಢಿಬದ್ಧ ಪಾತ್ರಗಳಿಂದ ಹೇಗೆ ಹೊರತರಬಹುದು ?
15. ಸಮವಯಸ್ಕರ ಮೌಲ್ಯಾಂಕನದ ಮಹತ್ತ್ವವೇನು ?
16. ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದ ವೈಶಿಷ್ಟ್ಯವಾಗಿ, ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ತೆಗೆದುಕೊಂಡ ಯಾವುದಾದರೂ ನಾಲ್ಕು ಅಂಶಗಳನ್ನು ಪಟ್ಟಿ ಮಾಡಿ.
17. ತಾರುಣ್ಯಾವಸ್ಥೆಯು ಆದರ್ಶವಾದದ ಅವಧಿ ಎನಿಸಲು ಕಾರಣಗಳೇನು ?
18. ಬುದ್ಧಿವಂತಿಕೆ ಒಂದು ಪ್ರಕ್ರಿಯೆ. ಇದರ ಬಗ್ಗೆ ಸ್ಟರ್ನ್‌ಬರ್ಗ್‌ರವರು ಪ್ರಸ್ತಾಪಿಸಿರುವ ಯಾವುದಾದರೂ ಎರಡು ಅಂಶಗಳನ್ನು ವಿವರಿಸಿ.

## ಭಾಗ – III

ಈ ಕೆಳಗಿನ ಪ್ರತಿ ಪ್ರಶ್ನೆಗೂ ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಒಂದಕ್ಕೆ ಉತ್ತರಿಸಿ. ಪ್ರತಿಯೊಂದು ಉತ್ತರವು ಒಂದು ಪುಟಕ್ಕೆ ಮೀರದಂತೆ ಉತ್ತರಿಸಿ : $8 \times 5 = 40$

19. ಸಂರಚನಾತ್ಮಕ ಬೋಧನಾ ಕಲಿಕೆ ಚಟುವಟಿಕೆಯ ಯಾವುದಾದರೂ ಐದು ಗುಣಲಕ್ಷಣಗಳನ್ನು ವಿವರಿಸಿ.

*ಅಥವಾ*

ಪಂದ್ಯಗಳ ಸಂದರ್ಭಗಳಲ್ಲಿ ಮಕ್ಕಳ ಸಮೂಹ ಗತಿಶಾಸ್ತ್ರವನ್ನು ವಿವರಿಸಿ.

20. ಸಾಮಾಜಿಕ ಹಿನ್ನಲೆಯಲ್ಲಿ ಕಲಿಕೆಯನ್ನು ವಿವರಿಸಿ.

*ಅಥವಾ*

ಸಾಮಾಜೀಕರಣದಲ್ಲಿ ಸಂಸ್ಕೃತಿಯ ಪಾತ್ರವನ್ನು ಉದಾಹರಣೆಯೊಂದಿಗೆ ವಿವರಿಸಿ.

21. ತರಗತಿಯಲ್ಲಿನ ವೈವಿಧ್ಯತೆಯನ್ನು ಸಂಪನ್ಮೂಲವಾಗಿ ಬಳಸಲು ನಿಮ್ಮ ಆಯ್ಕೆಯ ಒಂದು ಪಾಠಕ್ಕೆ ಯೋಜನೆಯನ್ನು ತಯಾರಿಸಿ.

*ಅಥವಾ*

Vನೇ ತರಗತಿ ವಿದ್ಯಾರ್ಥಿಗಳಿಗೆ ತ್ರಿಭುಜದ ಪರಿಕಲ್ಪನೆ ಮೂಡಿಸಲು, ತರಗತಿ ಅವಧಿಯ ಮೊದಲ ಹದಿನೈದು ನಿಮಿಷಗಳಿಗಾಗಿ ಮಗು–ಸ್ನೇಹಿ ಯೋಜನೆಯನ್ನು ಸಿದ್ಧಪಡಿಸಿ. ನಿಮ್ಮ ಯೋಜನೆ ಮಗು–ಸ್ನೇಹಿಯಾಗಿರುವುದನ್ನು ಸಮರ್ಥಿಸಿ.

22. ಶಿಕ್ಷಕರಿಗೆ ಶೈಕ್ಷಣಿಕ ಸಮಾಜಶಾಸ್ತ್ರ ಅಧ್ಯಯನದ ಅವಶ್ಯಕತೆಯನ್ನು ಚರ್ಚಿಸಿ.

***ಅಥವಾ***

ವಿದ್ಯಾರ್ಥಿಗಳ ಸಾಮಾಜೀಕರಣದಲ್ಲಿ ಶಿಕ್ಷಕರ ಪಾತ್ರವನ್ನು ಚರ್ಚಿಸಿ.

23. ನಿಮ್ಮ ಪರ್ಯಾಲೋಚನೆ ಕೋಲ್ಬ್‌ರವರ ಅನುಭವಾತ್ಮಕ ಕಲಿಕೆ ಸಿದ್ಧಾಂತವನ್ನು ಹೇಗೆ ಬಳಸುವಿರೆಂಬುದನ್ನು ಉದಾಹರಣೆಗಳೊಂದಿಗೆ ವಿವರಿಸಿ.

***ಅಥವಾ***

ರಾ.ಶಿ.ಶಿ.ಪ. ಚೌಕಟ್ಟು – NCFTE 2009 ರಲ್ಲಿ ಪಟ್ಟಿ ಮಾಡಲಾದ ಅಂಶಗಳನ್ನು ಗಳಿಸುವುದಕ್ಕಾಗಿ, ಬೋಧನಾ ಅಭ್ಯಾಸ ಹಾಗೂ ನಿಕಟ ಸೇವಾ ಪೂರ್ವ ಅವಧಿಯ ಯಾವ ಅನುಭವಗಳು ನಿಮಗೆ ಸಹಾಯಕವಾದುವು ? ಏಕೆ ?

24. ಪ್ರಭಾವಶಾಲಿ ಬೋಧನೆಗೆ ಜಾಗರೂಕ ಯೋಜನೆಯ ಪಾತ್ರವನ್ನು ನಿಮ್ಮ ಅನುಭವಗಳನ್ನು ಆಧರಿಸಿ, ಮೌಲ್ಯೀಕರಿಸಿ.

***ಅಥವಾ***

ಮಕ್ಕಳ ವ್ಯಕ್ತಿತ್ವದ ವಿಭಿನ್ನ ಪ್ರಕಾರಗಳ ಬೆಳವಣಿಗೆಯಲ್ಲಿ ಆಟಗಳ ಪಾತ್ರವನ್ನು ಮೌಲ್ಯೀಕರಿಸಿ. ನೀವು ಇವುಗಳಲ್ಲಿನ ಯಾವ ಅಂಶಗಳನ್ನು ಬಳಸಿದ್ದೀರಿ ?

25. ಪ್ರತಿಭಾನ್ವಿತ ಮಕ್ಕಳಿಗೆ ಶಿಕ್ಷಕರು ಹೆಚ್ಚಿನ ಒತ್ತು ಕೊಡುವ ಅಗತ್ಯವಿಲ್ಲವೆಂದು ಕೆಲವು ಶಿಕ್ಷಣ ತಜ್ಞರು ಅಭಿಪ್ರಾಯಪಡುತ್ತಾರೆ. ಈ ಅಭಿಪ್ರಾಯದ ಮಿತಿಗಳನ್ನು ಚರ್ಚಿಸಿ.

***ಅಥವಾ***

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮಕ್ಕಳ ಒಳಗೊಳ್ಳುವ ಶಿಕ್ಷಣಕ್ಕಾಗಿ ರಾಷ್ಟ್ರೀಯ ಫೋಕಸ್ ಗುಂಪಿನ ಪೊಸಿಷನ್ ಪೇಪರ್ ( NCERT 2005 ) ಮಾಡಿರುವ ಶಿಫಾರಸ್ಸುಗಳನ್ನು ನೀವು ಹೇಗೆ ಅನುಷ್ಠಾನಗೊಳಿಸುವಿರಿ ?

26. ಮಕ್ಕಳು ಮಾಡುವ ತಪ್ಪುಗಳು, ಅವರ ಚಿಂತನೆಯನ್ನು ಅರ್ಥ ಮಾಡಿಕೊಳ್ಳಲು ಶಿಕ್ಷಕರಿಗೆ ಹೇಗೆ ಅವಕಾಶ ನೀಡುತ್ತವೆ ? ನಿಮ್ಮ ಉತ್ತರವನ್ನು ಉದಾಹರಣೆಗಳೊಂದಿಗೆ ಸಮರ್ಥಿಸಿ.

***ಅಥವಾ***

ಶಿಕ್ಷಕರಾಗಿ ನಿಮ್ಮ ಅನುಭವಕ್ಕೆ ಬಂದಿರುವ ಕಲಿಕಾಗತಿಗಳು ಯಾವುವು ? ತರಗತಿ ಕಲಿಕೆಯನ್ನು ಸರಾಗಗೊಳಿಸುವಲ್ಲಿ ಕಲಿಕಾಗತಿಯ ಪಾತ್ರವನ್ನು ಉದಾಹರಣೆಯೊಂದಿಗೆ ಚರ್ಚಿಸಿ.

**( English Version )**

**PART – I**

Four choices have been given for each of the following questions. Choose the most appropriate answer and write in the answer-book. All the questions are compulsory. $10 \times 1 = 10$

1. Factor which provides opportunity for community participation in school administration is

   (A) centralized school administration (B) community programmes

   (C) election of people's representatives (D) effective decentralization.

2. Sequential order of the cognitive processes according to social interaction theory is

   (A) attention, retention, motor responses, motivation

   (B) retention, motor responses, attention, motivation

   (C) attention, motivation, retention, motor responses

   (D) retention, attention, motor responses, motivation.

3. The concept of Inclusive Education evolved as the result of which of the following factors ?

   I. Concern about children's learning

   II. Sympathy towards disabled

   III. Social justice.

   *of these :*

   (A) I, II and III (B) I and III

   (C) I and II (D) II and III.

4. Which of the following forms of assessment / test does a teacher use during lesson development stage ?

   (A) Formative assessment (B) Diagnostic test

   (C) Summative assessment (D) Achievement test.

5. The environment which primarily influences gendered roles, during the formative years is

   (A) political (B) academic

   (C) familial (D) psychological.

6. Learning to teach involves

   I. development of pedagogic skills

   II. deep understanding of the subject matter

   III. being thorough with the textbook

   IV. understanding of children.

   *of these :*

   (A) I, II and III  (B) I and II

   (C) III and IV  (D) I, II and IV.

7. Teacher's professional development can be achieved by involving them in

   (A) census work

   (B) curriculum related material development

   (C) election duty

   (D) frequent training.

8. A vital factor to ensure 'Education For All' is

   (A) stress on content based teaching

   (B) beautifying schools

   (C) involvement of parents and community leaders

   (D) enrolment of intelligent children.

9. A child with motor disability is absent due to inability to use toilet in the school. The barrier faced by the child in this situation is

   (A) structural design  (B) physical

   (C) intellectual  (D) psychological.

10. The most widespread educational network in Karnataka state is

   (A) Residential schools  (B) High schools

   (C) Navodaya schools  (D) Primary schools.

## PART – II

Answer any *five* of the following questions briefly, each answer not exceeding *half a* page. $5 \times 2 = 10$

11. What is the importance of effective pedagogy ?
12. Explain any *two* benefits of the reservation policy.
13. Explain any *two* attributes of learning.
14. How can a school break stereotyped gender roles ?
15. What is the importance of peer assessment ?
16. List any *four* aspects of quality education as envisaged in Sarva Shiksha Abhiyana.
17. Why is adolescent period considered as period of idealism ?
18. Explain any *two* factors of Sternberg's view on intelligence as a process.

## PART – III

There is an alternate question for each of the following. Answer either of them, each answer not exceeding *one* page. $8 \times 5 = 40$

19. Explain any *five* characteristics of constructivistic teaching-learning activities.

*OR*

Explain the group dynamics of children in the context of games.

20. Explain learning in a social context.

*OR*

What is the role of culture in socialization ? Describe with examples.

21. Prepare a plan for a lesson of your choice to use diversity in a classroom as a resource.

*OR*

You have to develop the concept of ‘triangles’ to class 5 students. Prepare a child-friendly plan to introduce this learning point during the first 15 minutes of the class. Justify how your plan is child-friendly.

22. Discuss the importance of study of Educational Sociology for teachers.

*OR*

Discuss the role of teachers in socialization of students.

23. With examples describe how you can use the theory of experiential learning for your own reflection.

*OR*

During practice in teaching and internship, what experiences helped you to acquire the qualities of a teacher listed in NCFTE, 2009 ? Why ?

24. Evaluate the role of careful planning for effective transaction based on your own experience.

*OR*

Evaluate the role of play in the development of different dimensions of personality. Which of these aspects of play did you use ?

25. Some educationists feel gifted children do not require additional inputs from a teacher. Argue why this opinion can be limiting.

*OR*

How do you implement the recommendations of the National Focus Group's position paper (NCERT, 2005) on inclusive education of Scheduled Caste and Scheduled Tribe ?

26. How do students' mistakes provide an opportunity for teachers to understand their thinking ? Illustrate your answer with examples.

*OR*

What are the learning paces you have experienced when you were in school as a teacher ? With examples discuss the role of learning paces on facilitating classroom learning.